**ವಿ ಸುನಿಲ್ ಕುಮಾರ್**
**ಶಾಸಕರು, ಕಾರ್ಕಳ ವಿಧಾನಸಭಾ ಕ್ಷೇತ್ರ**
**ಮಾನ್ಯ ಇಂಧನ ಮತ್ತು ಕನ್ನಡ ಸಂಸ್ಕೃತಿ ಇಲಾಖಾ ಸಚಿವರು**
**ಕರ್ನಾಟಕ ಸರಕಾರ, ಬೆಂಗಳೂರು**

**ಜನನ** : ಅತ್ಯಪೂರ್ವವಾದ ಸಂದರ್ಭ ಸ್ವಾತಂತ್ರ್ಯ ದಿನಾಚರಣೆಯ ದಿನ 15-08-1975
**ತಂದೆ** : ಶ್ರೀ ಎಂ.ಕೆ ವಾಸುದೇವ
**ತಾಯಿ** : ಶ್ರೀಮತಿ ಕೆ.ಪಿ ಪ್ರಮೋದ ದಂಪತಿಗಳ ತೃತೀಯ ಪುತ್ರ
**ಪತ್ನಿ** : ಶ್ರೀಮತಿ ಪ್ರಿಯಾಂಕ ಕೆ.ಎಸ್
**ಮಕ್ಕಳು** : ಪ್ರೇರಣಾ, ಪಂಚಮಿ, ದತ್ತಾತ್ರೇಯ
**ಶಿಕ್ಷಣ** : ಒಂದರಿಂದ ನಾಲ್ಕನೇ ತರಗತಿ ಕಾರ್ಕಳದ ರಾಮಪ್ಪ ಖಾಸಗಿ ಹಿರಿಯ ಪ್ರಾಥಮಿಕ ಶಾಲೆ ಪುಲ್ಕೇರಿ, ಐದರಿಂದ ಏಳನೇ ತರಗತಿ ಬಸವನಹಳ್ಳಿ ಹಿರಿಯ ಪ್ರಾಥಮಿಕ ಶಾಲೆ ಚಿಕ್ಕಮಗಳೂರು, ಪ್ರೌಢ ಶಿಕ್ಷಣ ಮತ್ತು ಪದವಿ ಪೂರ್ವ ಶಿಕ್ಷಣ ಶಿವಮೊಗ್ಗ ಜಿಲ್ಲೆಯ ಪದವಿ ಪೂರ್ವ ಕಾಲೇಜು ಹಿತ್ತಲ, ಚಿಕ್ಕಮಗಳೂರಿನ ಸರಕಾರಿ ಪ್ರಥಮ ದರ್ಜೆ ಕಾಲೇಜಿನಿಂದ ಕಲಾ ವಿಭಾಗದಲ್ಲಿ ಪದವಿ ಪಡೆದು ನಂತರ ಪತ್ರಕರ್ತರಾಗಿ ಸೇವೆ ಸಲ್ಲಿಸಿ ತದನಂತರ ಸಂಪೂರ್ಣವಾಗಿ ಸಮಾಜ ಸೇವೆಗಾಗಿ ತನ್ನನ್ನು ತಾನು ಸಮರ್ಪಣೆ.

**ನಡೆದು ಬಂದ ಹಾದಿ:**

- ಶಾಲಾ ಶಿಕ್ಷಣದ ಜೊತೆಜೊತೆಯಲ್ಲೇ ಅಪ್ಪಟ ದೇಶ ಪ್ರೇಮಿಯಾಗಿ ರೂಪುಗೊಳ್ಳುವಿಕೆ.
- ರಾಷ್ಟ್ರೀಯವಾದಿ ಚಿಂತನೆಯ ಒಲವು ಹೊಂದಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಹಾಗೂ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷದ್‌ನ ಕಡೆಗೆ ಆಕರ್ಷಿತರಾಗಿ ಸಂಘದ ಗರಡಿಯಲ್ಲಿ ಶಿಸ್ತಿನ ಶಿಪಾಯಿಯಾಗಿ ವ್ಯಕ್ತಿತ್ವ ನಿರ್ಮಾಣ.
- ಬಾಲ್ಯದಿಂದಲೇ ವಾಕ್ಚಾತುರ್ಯವನ್ನು ಬೆಳೆಸಿಕೊಂಡು ವಿವಿಧ ರೀತಿಯ ಭಾಷಣ, ಚರ್ಚೆ, ಭಾವಗೀತೆ, ದೇಶಪ್ರೇಮದ ಗೀತೆಗಳಲ್ಲಿ ಮುಂಚೂಣಿಯ ಸಾಧನೆ.
- ಹಿತ್ತಲ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭದಲ್ಲೇ ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗುವ ಮೂಲಕ 'ಬೆಳೆಯುವ ಸಿರಿ ಮೊಳಕೆ'ಯಲ್ಲೇ ಎಂಬ ಮಾತನ್ನು ಅನ್ವರ್ಥಗೊಳಿಸಿದ ನಾಯಕತ್ವ ಗುಣ.
- ಹಿಂದುತ್ವದ ಸಿದ್ಧಾಂತವನ್ನು ಮೈಗೂಡಿಸಿಕೊಂಡು ಬಜರಂಗದಳದ ಮೂಲಕ ಹಿಂದೂಪರ ಹೋರಾಟ ಅದಕ್ಕೆ ಕೈಗನ್ನಡಿಯೋ ಎಂಬಂತೆ 1997ರಲ್ಲಿ ರಾಷ್ಟ್ರದ ಗಮನ ಸೆಳೆದ ದತ್ತಪೀಠದ ಹೋರಾಟವನ್ನು ಒಂದು ವ್ರತದಂತೆ ಕೈಗೊಂಡ ರೀತಿ ಲಕ್ಷಾಂತರ ಜನರ ಮೆಚ್ಚುಗೆಯನ್ನು ಗಳಿಸಿತು. ಸಹಸ್ರ ಸಹಸ್ರ ಹಿಂದುಗಳನ್ನು ಒಟ್ಟುಗೂಡಿಸಿದರಲ್ಲದೆ ಅವರನ್ನು ದತ್ತಮಾಲೆಯನ್ನು ಧರಿಸಿ ಒಂದು ದೀಕ್ಷೆಯನ್ನು ಪಡೆಯುವಂತೆ ಪ್ರೇರೇಪಿಸಿತು.
- ಮುಂದೆ ಬಜರಂಗದಳ ಚಿಕ್ಕಮಗಳೂರು ಜಿಲ್ಲಾ ಸಂಚಾಲಕರಾಗಿ, ಕರ್ನಾಟಕ ರಾಜ್ಯ ಸಂಚಾಲಕರಾಗಿ ಸಂಘಟನೆಯನ್ನು ಬಲಪಡಿಸಿದ್ದು ಈಗ ಇತಿಹಾಸ.
- ನಿರಂತರ ಹೋರಾಟ, ಕಠಿಣ ಪರಿಶ್ರಮ, ನ್ಯಾಯ ನಿಷ್ಠುರತೆ , ಜನಪರ ಕಾಳಜಿ, ದೇಶಪ್ರೇಮ, ಅಂದಿನ ಸರಕಾರಗಳ ಸುಳ್ಳು ಪ್ರಕರಣಗಳ ಯಾವುದೇ ಬೆದರಿಕೆಗಳಿಗೆ ಜಗ್ಗದೆ, ಎದೆಗುಂದದೆ ಧೈರ್ಯವಾಗಿ ಎದುರಿಸಿದ್ದರಿಂದಲೇ ಮುಂದೆ ಅವಕಾಶಗಳು ಅರಸುತ್ತಾ ಬಂದುವು.
- ಪರಿಣಾಮವಾಗಿ 2004ರಲ್ಲಿ ಭಾರತೀಯ ಜನತಾ ಪಕ್ಷದ ಪ್ರತಿನಿಧಿಯಾಗಿ ಮೂರು ದಶಕಗಳ ಹಿನ್ನೆಲೆಯನ್ನು ಹೊಂದಿದ್ದು ಕಾಂಗ್ರೆಸ್‌ನ ಭದ್ರಕೋಟೆಯಾಗಿದ್ದ ಕಾರ್ಕಳದಲ್ಲಿ ಭಾರೀ ಬಹುಮತದೊಂದಿಗೆ ವಿಜಯ ಪತಾಕೆಯನ್ನು ಹಾರಿಸಿದ್ದು ಒಂದು ಐತಿಹಾಸಿಕ ದಾಖಲೆ. 2013ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಶಾಸಕಾರಿ ಆಯ್ಕೆಯಾಗಿ ಬಂದು  ರಾಜ್ಯ ಸಚಿವರ ಸ್ಥಾನಮಾನ ಹೊಂದಿರುವ ಕರ್ನಾಟಕ ಸರಕಾರದ ವಿರೋಧ ಪಕ್ಷದ ಮುಖ್ಯ ಸಚೇತಕರಾಗಿ ಆಯ್ಕೆ. ಮತ್ತೆ 2018 ರಲ್ಲಿ 42000 ಸಾವಿರ ಮತಗಳ ಅಂತರದಿಂದ ಜಯಗೊಳಿಸಿ ಮತ್ತೆ ವಿಧಾನಸಭೆಗೆ ಆಯ್ಕೆ ಹಾಗೂ ಸರ್ಕಾರಿ ಮುಖ್ಯ ಸಚೇತಕರಾಗಿ ನೇಮಕ, ಮುಂದೆ 2021 ಆಗಸ್ಟ್ ನಲ್ಲಿ ಕರ್ನಾಟಕ ಸರಕಾರದ ಇಂಧನ ಮತ್ತು ಕನ್ನಡ ಸಂಸ್ಕೃತಿ ಇಲಾಖಾ ಸಚಿವರಾಗಿ ಜವಬ್ದಾರಿ ದೊರಕ್ಕಿದ್ದು ಶ್ರೀ ವಿ ಸುನಿಲ್ ಕುಮಾರ್ ರವರ ನಾಯಕತ್ವಕ್ಕೆ ಸಾಕ್ಷಿ.

**ಸಾಧನೆಗಳ ವೀದಿ:**

- ಹುಟ್ಟು ಹೋರಾಟಗಾರನಾಗಿ ಅನೇಕ ಹೋರಾಟಗಳಿಗೆ ನೇತೃತ್ವ ನೀಡಿದ, ಮರುಜೀವ ನೀಡಿದ ಹೆಗ್ಗಳಿಕೆ. ಅದರ ಪರಿಣಾಮವಾಗಿ ಕಾಶ್ಮೀರ ಚಲೋದಂತಹ ಹೋರಾಟಕ್ಕೆ ನಾಯಕತ್ವ. ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ನೀಡಿದ ಭರವಸೆಯಂತೆ ಪ್ರಮಾಣ ವಚನ ಸ್ವೀಕರಿಸಿದ ಮರುಗಳಿಗೆಯಲ್ಲೇ ಪ್ರಥಮ ವಿಧಾನಸಭಾಧಿವೇಶನದಲ್ಲೇ ಹೆಬ್ರಿ ಸುಚೇತಾ ಶೆಟ್ಟಿ ಕೊಲೆ ಪ್ರಕರಣವನ್ನು ಪ್ರಸ್ತಾಪಿಸಿ ನ್ಯಾಯಕ್ಕಾಗಿ ಹೋರಾಟ.
- ತನ್ನ ಛಲಭರಿತ ಹೋರಾಟದಿಂದ ಕಾರ್ಕಳದ ವಿಶ್ವಕರ್ಮ ಸಮಾಜ ಬಾಂದವರ ಆಡಳಿತಕ್ಕೊಳಪಟ್ಟ ಶ್ರೀ ಕಾಳಿಕಾಂಬ ದೇವಾಲಯದ ಜಮೀನಿನ ಸಮಸ್ಯೆಯನ್ನು ಬಗೆಹರಿಸಿದ್ದು.
- ತನ್ನ ಶಾಸಕತ್ವದ ಪ್ರಥಮ ಅವಧಿಯಲ್ಲೇ ಎಲ್ಲಾ ಕಾನೂನಿನ ತೊಡಕುಗಳನ್ನು ಪರಿಹರಿಸಿ ಸರಕಾರದ ಸವಲತ್ತುಗಳನ್ನು ಪಡೆಯುವಲ್ಲಿ ಅವಕಾಶ ವಂಚಿತರಾದ ಜನರಿಗೆ ಪರಿಹಾರ. ಆ ನೆಲೆಯಲ್ಲಿ ಅತ್ಯಂತ ಬಡವರ ಮನೆಗೆ ದಾನಿಗಳ ನೆರವಿನಿಂದ ಮೂರು ಲಕ್ಷ ಹಂಚುಗಳ ಕೊಡುಗೆ. ಆ ಪ್ರಕ್ರಿಯೆಯನ್ನು ಈ ತನಕವೂ ಮುಂದುವರೆಸಿಕೊಂಡು ಬಂದಿರುವುದು ಒಂದು ಐತಿಹಾಸಿಕ ಸಾಧನೆ.
- ಜಾತಿ ತಾರತಮ್ಯವನ್ನು ಹೋಗಲಾಡಿಸಿ ದುಂದುವೆಚ್ಚವನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಕಳದಲ್ಲಿ ಸಾಮೂಹಿಕ ವಿವಾಹ ಪರಿಕಲ್ಪನೆಯನ್ನು ಸಾಕಾರಗೊಳಿಸಿ ತಾನೂ ಕೂಡ ಸಾಮೂಹಿಕ ವಿವಾಹದಲ್ಲೇ ಮದುವೆಯಾಗಿ ಸಮಾಜಕ್ಕೆ ಅನುಸರಣೀಯವಾದುದು.
- ಕ್ಷೇತ್ರದ ಜನರ ಉಪಯೋಗಕ್ಕಾಗಿ ಉದ್ಯೋಗ ಮೇಳ ನಡೆಸಿ ಅನೇಕ ಜನರಿಗೆ ಉದ್ಯೋಗ ದೊರಕಿಸಿ ಕೊಡುವಲ್ಲಿ ಪ್ರಾಮಾಣಿಕ ಕಾಳಜಿ. 2000 ಉದ್ಯೋಗಾಂಕ್ಷಿಗಳು, 50 ಕಂಪನಿಗಳು ಭಾಗವಹಿಸಿ 600 ಕ್ಕೂ ಹೆಚ್ಚು ಜನರಿಗೆ ಹೊಟ್ಟೆ ಹೊರೆಯುವ ಕಾಯಕ.
- ಹಿಂದು ಪರ ಹೋರಾಟಗಾರರಾಗಿ ರಾಜಾದಾದ್ಯಂತ ಪ್ರವಾಸ ಮಾಡಿದ್ದ ಇವರು ಚಿಕ್ಕಮಗಳೂರಿನ ಚಂದ್ರದ್ರೋಣ ಪರ್ವತದಲ್ಲಿರುವ ದತ್ತಪೀಠದ ಬಗ್ಗೆ ವಿಧಾನಸಭೆಯಲ್ಲಿ ಹೋರಾಟ ನಡೆಸಿ ಅಧಿವೇಶನದ ಸಂದರ್ಭದಲ್ಲಿ ಸದನದ ಬಾವಿಗಿಳಿದು ಪ್ರತಿಭಟನೆ.
- ಹಿಂದುಗಳ ಆರಾಧ್ಯ ದೇವರಾದ ಶ್ರೀ ರಾಮಚಂದ್ರನೇ ನಿರ್ಮಿಸಿದ ರಾಮಸೇತುವನ್ನು ಧ್ವಂಸ ಮಾಡಲು ಹೊರಟ ಸರಕಾರಗಳ ಹುನ್ನಾರದ ವಿರುದ್ಧ ಧ್ವನಿಯೆತ್ತಿ ಜಾಗೃತಿ ಮೂಡಿಸಿ ಸಾವಿರಾರು ಜನರನ್ನು ಸಂಘಟಿಸಿ ರಾಮೇಶ್ವರದಲ್ಲಿ ನಡೆದ ಬೃಹತ್ ಪ್ರತಿಭಟನೆಗೆ ಪಾಲ್ಗೊಂಡಿದ್ದು.
- ರಾಜಕೀಯದಲ್ಲಿ ಗುರುತರ ಜವಾಬ್ದಾರಿಯನ್ನು ನಿಭಾಯಿಸಿದ ಹೆಗ್ಗಳಿಕೆ. ಬಾಜಪದ ರಾಜ್ಯ ಕಾರ್ಯದರ್ಶಿಯಾಗಿ, ರಾಷ್ಟ್ರೀಯ ಯುವ ಮೋರ್ಚಾದ ಕಾರ್ಯದರ್ಶಿಯಾಗಿ ಸೇವೆ, ಗೋವಾ ಚುನಾವಣೆಯ ಉಸ್ತುವಾರಿ ವಹಿಸಿ ರಾಜಕೀಯ ಪ್ರಬುದ್ಧತೆಯ ಪ್ರದರ್ಶನ. ರಾಜ್ಯ ಯುವಮೋರ್ಚಾ ಅಧ್ಯಕ್ಷರಾಗಿ ಮೂರು ವರ್ಷ ರಾಜ್ಯದಾದ್ಯಂತ ಸಂಚರಿಸಿ ಪಕ್ಷ ಸಂಘಟನೆ ಹಲವು ಯಶಸ್ವಿ ಸಮಾವೇಶಗಳ ಸಂಯೋಜನೆ.
  - ➢ ವಿನೂತನ ರೀತಿಯ ಸಮಾವೇಶಗಳು, ಅಭ್ಯಾಸ ವರ್ಗಗಳ ಸಂಯೋಜನೆ.
  - ➢ ದೇಶದಲ್ಲೇ ಪ್ರಥಮ ಬಾರಿಗೆ ಒಂದು ವಿಧಾನ ಸಭಾ ವ್ಯಾಪ್ತಿಯಲ್ಲಿ ಅಭೂತ ಪೂರ್ವ ಮಹಿಳಾ ಸಮಾವೇಶವನ್ನು ಸಂಘಟಿಸಿ ಹನ್ನೆರಡು ಸಾವಿರ ಮಹಿಳೆಯರನ್ನು ಬಾಜಪದ ಪತಾಕೆಯಡಿ ಸೇರಿಸಿದ ಪರಾಕ್ರಮ.
  - ➢ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮಾವೇಶವನ್ನು ಸಂಘಟಿಸಿ ಒಂದು ವಿಧಾನಸಭಾ ವ್ಯಾಪ್ತಿಯಲ್ಲಿ ಎರಡು ಸಾವಿರ ಜನರನ್ನು ಸೇರಿಸಿದ ಪ್ರಯತ್ನ.

- **ರಾಷ್ಟ್ರೀಯ ಪ್ರಜ್ಞೆ**
  - ➢ ಅಪ್ರತಿಮ ಹೋರಾಟಗಾರರಾಗಿದ್ದ ವಿನಾಯಕ ದಾಮೋದರ ಸಾವರ್ಕರ್‌ರವರ ಜನ್ಮ ಶತಮಾನೋತ್ಸವದ ಅರ್ಥಪೂರ್ಣ ಅಚರಣೆ ನಡೆಸಿ ಕಾರ್ಕಳ ತಾಲೂಕಿನಾದ್ಯಂತ ಯುವಜನರಿಗೆ, ವಿದ್ಯಾರ್ಥಿಗಳಿಗೆ ವಿಶೇಷ ಉಪನ್ಯಾಸ ಸರಣಿಗಳನ್ನು ನಡೆಸಿ ರಾಷ್ಟ್ರ ಪ್ರೇಮದ ಕಹಳೆ ಮೊಲಗಿಸಿದ್ದು.
  - ➢ 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ 150ನೇ ವರ್ಷಾಚರಣೆಯ ಅದ್ದೂರಿ ಆಚರಣೆ ತಾಲೂಕಿನ ವಿದ್ಯಾರ್ಥಿಗಳೊಂದಿಗೆ ಚಹಾ ಕೂಟದ ಒಡನಾಟದೊಂದಿಗೆ ದೇಶ ಪ್ರೇಮವನ್ನು ಮೂಡಿಸಿದ ಸಾರ್ಥಕ ಸೇವೆ.

- **ಕ್ಷೇತ್ರದ ಅಭಿವೃದ್ಧಿ ಮತ್ತು ಜನಪರ ಕಾಳಜಿ**

- ಸ್ವಾತಂತ್ರ್ಯ ಭಾರತದ ಆರು ದಶಕಗಳಲ್ಲಾಗದ ಕಾರ್ಯಗಳನ್ನು ಕೈಗೆತ್ತಿಕೊಂಡು ಕ್ರಿಯಾಶೀಲತೆ ಮತ್ತು ಜನಪರ ಕಾಳಜಿಯಿಂದ ತಾಲೂಕಿನ ಹಳ್ಳಿ ಹಳ್ಳಿಗಳಿಗೆ ಸಂಪರ್ಕ ಸಾಧಿಸಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ.
- ಶಾಸಕರಾದ ತಕ್ಷಣವೇ ಕಾರ್ಯ ಪ್ರವೃತ್ತರಾದ ಶಾಸಕರು ಕ್ಷೇತ್ರದ ಎಲ್ಲಾ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಒದಗಿಸಿದ್ದು.
- ಕ್ಷೇತ್ರದ ಅತ್ಯಂತ ಹಿಂದುಳಿದ ಹಾಗೂ ಸಂಪರ್ಕ ರಸ್ತೆ ಇಲ್ಲದ ಪ್ರದೇಶಗಳಿಗೆ ಪ್ರಥಮ ಆದ್ಯತೆಯಲ್ಲಿ ರಸ್ತೆ, ಸೇತುವೆಗಳ ನಿರ್ಮಾಣ.
- ಕಾರ್ಕಳದ ಇತಿಹಾಸದಲ್ಲೇ ಮೊದಲ ಬಾರಿಗೆ ಕೇಂದ್ರ ಸರಕಾರದಿಂದ ಕ್ಷೇತದ ಅಭಿವೃದ್ಧಿಗಾಗಿ **87 ಕೋಟಿ ಅನುದಾನ** ತರಿಸಿದ ಕೀರ್ತಿ.
- ಅಧಿವೇಶನದಲ್ಲಿ 100% ಭಾಗವಹಿಸಿದ್ದು ಪಡಿತರ ಚೀಟಿ, ಭಯೋತ್ಪಾದನೆ ಇತ್ಯಾದಿ ಹತ್ತು ಹಲವು ವಿಷಯಗಳ ಪ್ರಸ್ತಾಪ, ವಿಸ್ತೃತ ಚರ್ಚೆ, ಯಶಸ್ವಿ ಪಾಲ್ಗೊಳ್ಳುವಿಕೆಯಿಂದ ಹಲವು ಸಮಸ್ಯೆಗಳಿಗೆ ಪರಿಹಾರ. ವಿಧಾನಸಭಾ ಅಧಿವೇಶನದ ಪ್ರಶ್ನೋತ್ತರ ವೇಳೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಜನಪ್ರತಿನಿಧಿಗಳಲ್ಲಿ ಮುಂಚೂಣಿ ಸಾಲಿನಲ್ಲಿರುವ ಶಾಸಕ ಜನನಾಯಕ.
- ಕಾರ್ಕಳ ತಾಲೂಕಿನ ಅತ್ಯಂತ ಕುಗ್ರಾಮಗಳ ಕಾಡಿನಲ್ಲಿ ಹತ್ತಾರು ವರ್ಷಗಳಿಂದ ಅನೇಕ ಕಷ್ಟ ಕಾರ್ಪಣ್ಯಗಳ ನಡುವೆಯೇ ವಾಸವಿರುವ, ಈ ತನಕ ಯಾರೂ ಗಮನ ಹರಿಸದ ಬಡ ಮಲೆಕುಡಿಯ ಜನಾಂಗದ ನೊವುಗಳನ್ನು ಆಲಿಸಿದ ಮೊದಲ ಶಾಸಕ.
- ನಕ್ಸಲ್ ಪೀಡಿತ ಪ್ರದೇಶದ ಜನರ ಬಳಿ ಸಾಗಿ ಅವರೊಂದಿಗೆ ಮುಕ್ತ ಚರ್ಚೆ ಹಾಗೂ ಅವರನ್ನು ಮುಖ್ಯ ವಾಹಿನಿಗೆ ತರುವಲ್ಲಿ ಪ್ರಮುಖ ಪ್ರಯತ್ನ.
- ಪ್ರಸ್ತುತ ಇರುವ ಭೀಕರ ಸಮಸ್ಯೆಗಳಾದ ವಾತಾವರಣದಲ್ಲಿ ಏರುತ್ತಿರುವ ಉಷ್ಣತೆ ಮತ್ತು ಕುಸಿಯುತ್ತಿರುವ ಅಂತರ್ಜಲ ಇವುಗಳಿಂದಾಗಿ ಕಾರ್ಕಳ ತಾಲೂಕಿಗೂ ಬಿಸಿ ಮುಟ್ಟಿರುವ ನೀರಿನ ಸಮಸ್ಯೆಯಿಂದ ಜನರು ಎಚ್ಚೆತ್ತು ಕೊಳ್ಳಬೇಕೆಂಬ ದೃಷ್ಟಿಯಿಂದ ತನ್ನ ಕ್ಷೇತ್ರವಿಡೀ ಜಾಗೃತಿ ಕಾರ್ಯಕ್ರಮ **"ಒಂದು ಜನ–ಒಂದು ಸಸಿ, ಒಂದು ಮನೆ – ಒಂದು ಇಂಗುಗುಂಡಿ"** ಎಂಬ ಧ್ಯೇಯ ವಾಕ್ಯದೊಂದಿಗೆ ತಾಲೂಕಿನ ಹಳ್ಳಿ ಹಳ್ಳಿಗಳನ್ನು ಸಂಚರಿಸಿ, ಯುವಕರನ್ನು ವಿವಿಧ ಸಂಘಟನೆಗಳನ್ನು ಒಟ್ಟುಗೂಡಿಸಿದ ದೇಶದ ಮೊದಲ ಪರಿಸರ ಸ್ನೇಹ ಶಾಸಕ ಎಂಬ ಬಿರುದು.
- **200 ಕೋಟಿಗೂ ಹೆಚ್ಚು ಅನುದಾನವನ್ನು ಬಳಸಿಕೊಂಡು 180ಕ್ಕೂ ಹೆಚ್ಚು ಕಿಂಡಿ ಅಣೆಕಟ್ಟುಗಳನ್ನು** ನಿರ್ಮಾಣಕ್ಕೆ ಚಾಲನೆ ನೀಡಿ, ರೈತರ ಬೆಳೆಗಳಿಗೆ ಉಂಟಾಗುವ ನೀರಿನ ಸಮಸ್ಯೆಯಿಂದ ಹೊರಬರಲು ಭಗೀರಥ ಪ್ರಯತ್ನ ಮಾಡಿರುವುದು ರಾಜ್ಯದಲ್ಲಿ ದಾಖಲೆಯೇ ಸರಿ.
- **108 ಕೋಟಿ ರೂ ವೆಚ್ಚದಲ್ಲಿ ಕಾರ್ಕಳ ಕ್ಷೇತ್ರದ ಅಜೆಕಾರು ಎಣ್ಣೆಹೊಳೆ ಸ್ವರ್ಣ ನದಿಗೆ ಏತ ನೀರಾವರಿ ಯೋಜನೆ**. ಸುಮಾರು 1.500 ಹೆಕ್ಟೇರ್‌ಗೂ ಹೆಚ್ಚಿನ ಜಲಾನಯನ ಪ್ರದೇಶ. ಸುಮಾರು 40 ಕಿಂಡಿ ಅಣೆಕಟ್ಟುಗಳ ನಿರ್ಮಾಣ. ಇದರಿಂದ ಪರಿಸರದ ಅಂತರ್ಜಲ ಪ್ರಮಾಣ ಹೆಚ್ಚಳ, ಕೃಷಿಗೆ ಉತ್ತೇಜನ ಮತ್ತು ಕುಡಿಯುವ ನೀರಿನ ಯೋಜನೆ ಕಲ್ಪಿಸುವ ಮಹತ್ತರ ಯೋಜನೆ.
- ವಿನೂತನ ಕಲ್ಪನೆಯ **ಪರಿಸರ ಉತ್ಸವವನ್ನು** 25,000 ಸಸಿ 25000 ಇಂಗುಗುಂಡಿ ರಚಿಸುವ ಮೂಲಕ ಆರಂಭಿಸಿ ಪರಿಸರ ಸಂರಕ್ಷಣೆ. ಪ್ರತಿ ವರ್ಷ ಈ ಕಾರ್ಯಕ್ರಮ ಆಯೋಜನೆ.
- ಬಡ ವಿದ್ಯಾರ್ಥಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಕಳದ ಮಿಯ್ಯಾರಿನಲ್ಲಿ **ಮೋರಾರ್ಜಿ ದೇಸಾಯಿ ವಸತಿ ಶಾಲೆ, ವೃತ್ತಿಪರ ಕೋರ್ಸ್ ಕಲಿಕೆಗೆ ಬಗ್ಗೆ ಪಾಲಿಟೆಕ್ನಿಕ್ ಕಾಲೇಜು, ಸರಕಾರಿ ಐಟಿಐ ಕಾಲೇಜು, ಕರ್ನಾಟಕ ಜರ್ಮನ್ ತಾಂತ್ರಿ ತರಬೇತಿ ಸಂಸ್ಥೆ** ಪ್ರಾರಂಭ ಹಾಗೂ ಕಾರ್ಕಳ ತಾಲೂಕಿನ ಬಹುತೇಕ ಎಲ್ಲಾ ಸರಕಾರಿ ಶಾಲಾ–ಕಾಲೇಜುಗಳ ಪುನಶ್ಚೇತನ.
- ತುಳುನಾಡಿನ ಅಮರ ವೀರರಾದ ಕೋಟಿ ಚೆನ್ನಯರ ಹೆಸರಿನಲ್ಲಿ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ **ಕೋಟಿ ಚೆನ್ನಯ ಥೀಂ ಪಾರ್ಕ್** ನಿರ್ಮಾಣ ಮತ್ತು ನಿರಂತರ ಅಭಿವೃದ್ಧಿ ಹಾಗೂ ಆಧುನಿಕತೆಯ ಸ್ಪರ್ಶ.
- ಕಾರ್ಕಳ ಹಿರಿಯಂಗಡಿ ಬಳಿ 60.00 ಲಕ್ಷ ವೆಚ್ಚದಲ್ಲಿ ನಿರ್ಮಿಸಿದ ಯಾತ್ರಿ ನಿವಾಸ.
- ಕ್ರೀಡೆಯಲ್ಲಿ ವಿಶೇಷ ಒಲವು ಹೊಂದಿರುವ ಇವರು ಕಾರ್ಕಳ ತಾಲೂಕಿನಲ್ಲಿ ಸುಸಜ್ಜಿತವಾದ ಒಳಾಂಗಣ ಕ್ರೀಡಾಂಗಣ ನಿರ್ಮಾಣ. ಕ್ರೀಡಾಸಕ್ತರಿಗಾಗಿ ಸುಸಜ್ಜಿತ ಈಜುಕೊಳದ ನಿರ್ಮಾಣ. ಕಾರ್ಕಳ ತಾಲೂಕು ಕಛೇರಿ ಬಳಿ ಮಕ್ಕಳು, ಮಹಿಳೆಯರು ಮತ್ತು ಹಿರಿಯ ನಾಗರೀಕರಿಗೆ ತೆರೆದ ಜಿಮ್ ಸ್ಥಾಪನೆ.
- ನಾಡು–ನುಡಿ ಮತ್ತು ಗ್ರಾಮೀಣ ಸಂಸ್ಕೃತಿಯ ಬಗೆಗೆ ವಿಶೇಷ ಒಲವು ಹೊಂದಿರುವ ಶಾಸಕರು, ಆಧುನಿಕ ಭರಾಟೆಯಲ್ಲಿ ತೆರೆಯ ಮರೆಗೆ ಸರಿಯುತ್ತಿರುವ ಗ್ರಾಮೀಣ ಸಂಸ್ಕೃತಿ ಮತ್ತು ಕ್ರೀಡೆಯನ್ನು ಉತ್ತೇಜಿಸುವ ಸಲುವಾಗಿ ಆಟಿ ತಿಂಗಳ ಆಚರಣೆ, ದೀಪಾವಳಿ ಆಚರಣೆಗಳು, **'ಆಟಿಡೊಂಜಿ ಕಮಲ ಕೂಟ'** ದಂತಹ ಕಾರ್ಯಕ್ರಮಗಳ ಮೂಲಕ ಮಣ್ಣಿನ ಸಂಸ್ಕೃತಿ ಮತ್ತು ಗ್ರಾಮೀಣ ಕ್ರೀಡೆಗಳನ್ನು ಪ್ರೋತ್ಸಾಹಿಸಿದ್ದು ಜನಜನಿತ.

- ಜನರ ಭಾವನೆಗಳಿಗೆ ಧಕ್ಕೆಯಾದಾಗ ಜೀವನವನ್ನು ಕಸಿದುಕೊಳ್ಳುವ ಯತ್ನಗಳಾದಾಗಲೆಲ್ಲಾ ತೀವ್ರವಾದ ಹೋರಾಟಗಳನ್ನು ಸಂಘಟಿಸಿ ಹಳ್ಳಿಯಿಂದ ರಾಜ್ಯ ರಾಜಧಾನಿಯವರೆಗೂ ಗಮನ ಸೆಳೆದು ನ್ಯಾಯಕ್ಕಾಗಿ ಹೋರಾಡುವ ಛಲ. ವಿದ್ಯುತ್ ಕಡಿತ, ಮರಳು ನೀತಿ, ಭ್ರಷ್ಟಾಚಾರ, ನಕ್ಸಲ್ ಸಮಸ್ಯೆ, ಕಸ್ತೂರಿ ರಂಗನ್ ವರದಿ, ಹುಲಿಯೋಜನೆ ಇವೇ ಮೊದಲಾದ ವಿಚಾರಗಳ ಕುರಿತಾಗಿ ತೀವ್ರವಾದ ಹೋರಾಟ ಸಂಘಟಿಸಿ ಸರಕಾರದ ಕಣ್ತೆರೆಸುವ ಕೆಲಸ.
- **"ಯುವ ಶಕ್ತಿ ರಾಷ್ಟ್ರ ಶಕ್ತಿ"** ಎಂಬ ವಿಚಾರವನ್ನು ಮನಗಂಡು ಕಾರ್ಕಳದ ಯುವ ಶಕ್ತಿಯ ಅನಾವರಣಕ್ಕೆ ಪ್ರಯತ್ನ. ಯುವ ಕಾರ್ಯಕರ್ತರ ಯುವ ಸಂಕಲ್ಪ ಸಮಾವೇಶ, ಮಹಾ ಸಂಪರ್ಕ ಅಭಿಯಾನ ಮುಂತಾದ ವಿನೂತನ ಸಂಘಟನಾ ಚತುರತೆ.
- ಬಡರೋಗಿಗಳಿಗೆ ಅತ್ಯುತ್ತಮ ಸೇವೆ ಒದಗಿಸುವ ನಿಟ್ಟಿನಲ್ಲಿ **ಕಾರ್ಕಳ ಸರಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಸುಸಜ್ಜಿತವಾದ ವ್ಯವಸ್ಥೆಗಳನ್ನು ಕಲ್ಪಿಸಿದ್ದು**. ಇದೀಗ 6 ಕೋಟಿ ವೆಚ್ಚದಲ್ಲಿ ಹೊಸ ಕಟ್ಟಡ ನಿರ್ಮಾಣ.
- ಮಾನ್ಯ ಪ್ರಧಾನ ಮಂತ್ರಿಗಳ ಮೇಕ್ ಇನ್ ಇಂಡಿಯಾ ಯೋಜನೆಯಡಿ ಸ್ಥಳೀಯ ಯುವಕ ಯುವತಿಯರಿಗೆ ಉದ್ಯೋಗ ಹಾಗೂ ಕೈಗಾರಿಕೋದ್ಯಮಕ್ಕೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ **ಮಿಯ್ಯಾರಿನಲ್ಲಿ 120 ಎಕರೆ ವಿಸ್ತೀರ್ಣದಲ್ಲಿ ಕೈಗಾರಿಕಾ ಪ್ರಾಂಗಣ** ರಚನೆ.
- **ಕಾರ್ಕಳ ತಾಲೂಕಿನಾದ್ಯಂತ ಬದಲಾದ ರಸ್ತೆಗಳು, ಸುಂದರವಾದ ರಸ್ತೆಗಳು ವಿ. ಸುನಿಲ್ ಕುಮಾರ್‌ರವರ ಕರ್ತೃತ್ವ ಶಕ್ತಿಗೆ ಉದಾಹರಣೆ**. ಪುಲ್ಕೆರಿ ಜಂಕ್ಷನ್‌ನಿಂದ ಜೋಡುರಸ್ತೆಯನ್ನು ಸಂಪರ್ಕಿಸುವ ರಸ್ತೆ, ಬೈಲೂರಿನ ರಸ್ತೆ ಹೀಗೆ ಜನ ಜೀವನವನ್ನು ಬೆಸೆಯುವ ರಸ್ತೆಗಳು ಶಾಸಕರು ಕ್ಷೇತ್ರದ ಪ್ರಗತಿಯ ಬಗೆಗೆ ಹೊಂದಿರುವ ದೂರದೃಷ್ಟಿಯನ್ನು ಪ್ರತಿಫಲಿಸುತ್ತದೆ.
- ಕೇಂದ್ರ ಸರಕಾರದ **39 ಕೋಟಿ ರೂಪಾಯಿ** ಅನುದಾನದೊಂದಿಗೆ ಕಾರ್ಕಳ–ಸಾಣೂರು–ಬೆಳುವಾಯಿಯನ್ನು ಸಂಪರ್ಕಿಸುವ ರಸ್ತೆ, **29 ಕೋಟಿ ರೂಪಾಯಿ** ಅನುದಾನದೊಂದಿಗೆ ಕಾರ್ಕಳ – ಬಜಗೋಳಿ–ಮಾಳಗಳನ್ನು ಸಂಪರ್ಕಿಸುವ ರಸ್ತೆಗಳು ಅತ್ಯಂತ ಕಡಿಮೆ ಅವದಿಯಲ್ಲಿ ಯಾವುದೇ ಶಾಸಕರು ಮಾಡಬಹುದಾದ ಅತ್ಯಂತ ವಿರಳ ಸಾಧನೆಯನ್ನು ಹೇಳಲೇಬೇಕು.
- ಹಲವಾರು ವರ್ಷಗಳಿಂದ ಸರಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದ, ಹಕ್ಕುಪತ್ರ ಸಿಗದೆ ಸರಕಾರಿ ಸೌಲಭ್ಯಗಳಿಂದ ವಂಚಿತರಾಗಿದ್ದ ಬಡ ಜನರಿಗೆ **ನಮೂನೆ 94ಸಿ ಮತ್ತು 94**ಸಿಸಿ ಕಾನೂನು ಜಾರಿಗೆ ತರುವಲ್ಲಿ ಸರಕಾರದ ಮಟ್ಟದಲ್ಲಿ ಮಹತ್ತರ ಪಾತ್ರ ವಹಿಸಿರುವುದು.
- **ನಮೂನೆ 53, 94ಸಿ ಮತ್ತು 94ಸಿಸಿ ರಲ್ಲಿ ಅರ್ಜಿ ಸಲ್ಲಿಸಿ ಡೀಮ್ಡ್ ಫಾರೆಸ್ಟ್ ಸಮಸ್ಯೆಯ** ಕಾರಣದಿಂದಾಗಿ ಹಕ್ಕುಪತ್ರ ಸಿಗದೆ ಇರುವ ಬಗ್ಗೆ ಸರಕಾರದ ಗಮನ ಸೆಳೆದು ಸರಕಾರದ ಮಟ್ಟದಲ್ಲಿ ಡೀಮ್ಡ್ ಫಾರೆಸ್ಟ್ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸಿ, ಸಮಸ್ಯೆ ಬಗೆಹರಿಸುವ ಹಂತಕ್ಕೆ ಬರುವಲ್ಲಿ ನಿರಂತರ ಹೋರಾಟ ಮತ್ತು ಅದರಲ್ಲಿ ಯಶಸ್ವಿ.
- ದಾನಿಗಳ ಸಹಕಾರದೊಂದಿಗೆ ಕಾರ್ಕಳ ನಗರದ ಹೃದಯ ಭಾಗದಲ್ಲಿರುವ **ಸಿಗಡಿ ಕೆರೆ ಅಭಿವೃದ್ಧಿ** ಹಾಗೂ ಕ್ಷೇತ್ರದ ಹಲವಾರು ಕೆರೆಗಳ ಪುನಶ್ಚೇತನ.
- ಗಾಂಧೀಜಿಯವರ 150 ನೇ ಜಯಂತಿಯನ್ನು ಸ್ವಚ್ಛತೆಗೆ ಆದ್ಯತೆಕೊಟ್ಟು ಆಚರಿಸುವ ಎಂಬ ಕರೆ ನೀಡಿದ್ದ ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರ ಆಶಯಕ್ಕೆ ಪೂರಕವಾಗಿ ಕಾರ್ಕಳದಲ್ಲಿ ಶಾಸಕ ವಿ ಸುನಿಲ್ ಕುಮಾರ್ ನೇತೃತ್ವದಲ್ಲಿ **ಸ್ವಚ್ಛ ಕಾರ್ಕಳ – ಸ್ವರ್ಣ ಕಾರ್ಕಳ** ಎಂಬ ವಿಶೇಷ ಕಾರ್ಯಕ್ರಮ ಆಯೋಜಿಸಲಾಯಿತು. ಇಡೀ ರಾಜ್ಯದಲ್ಲಿಯೇ ಪ್ರಥಮವಾಗಿ ಹಮ್ಮಿಕೊಂಡಿರುವ ಈ ಅಭಿಯಾನಕ್ಕೆ ಪೂರ್ವಭಾವಿಯಾಗಿ ಹಮ್ಮಿಕೊಂಡಿರುವ ಸಂಕಲ್ಪ ಕಾರ್ಯಕ್ರಮಕ್ಕೆ ಅಭೂತ ಪೂರ್ವ ಬೆಂಬಲ ವ್ಯಕ್ತವಾಗುವುದರೊಂದಿಗೆ ಅಂದು ನಡೆದ ಸ್ವಚ್ಛತಾ ಅಭಿಯಾನದಲ್ಲಿ ಸುಮಾರು 500 ಕ್ಕೂ ಹೆಚ್ಚು ಸಂಘ ಸಂಸ್ಥೆಗಳು ಸೇರಿದಂತೆ ವಿದ್ಯಾರ್ಥಿಗಳನ್ನು ಹೊರತು ಪಡಿಸಿ ಸುಮಾರು 20 ಸಾವಿರಕ್ಕೂ ಅಧಿಕ ಸಾರ್ವಜನಿಕರು ತಮ್ಮ ತಮ್ಮ ಪರಿಸರದಲ್ಲಿ ಸ್ವಚ್ಛತೆ ಮಾಡುವ ಮೂಲಕ ಅಭಿಯಾನದಲ್ಲಿ ಪಾಲ್ಗೊಂಡಿರುವುದು ಕಾರ್ಯಕ್ರಮದ ಭರ್ಜರಿ ಯಶಸ್ಸಿಗೆ ಸಾಕ್ಷಿ.
- ಕಾರ್ಕಳ ನಗರ ಪ್ರದೇಶಕ್ಕೆ ಸಂಬಂದಿಸಿದಂತೆ ಹಳೆಯ ಒಳಚರಂಡಿ ದುರಸ್ಥಿ ಹಾಗೂ **13 ಕೋಟಿ ವೆಚ್ಚದಲ್ಲಿ ಆಧುನಿಕ ಒಳಚರಂಡಿ ನಿರ್ಮಾಣ ಕಾಮಗಾರಿ. ತ್ಯಾಜ್ಯ ನಿರ್ವಹಣಾ ಘಟಕ ನಿರ್ಮಾಣ.**
- ಕ್ಷೇತ್ರದಾದ್ಯಂತ ನೂತನ ಸರಕಾರಿ ಕಟ್ಟಡಗಳ ನಿರ್ಮಾಣಕ್ಕೆ ಆಧ್ಯತೆ. **ಕಾರ್ಕಳ ಪ್ರವಾಸಿ ಮಂದಿರ, ಸಾರ್ವಜನಿಕ ಆಸ್ಪತ್ರೆ, ಶಾಲಾ ಕಾಲೇಜು ಕಟ್ಟಡಗಳು, ಪೊಲೀಸ್ ವಸತಿ ಗೃಹಗಳು, ವಸತಿ ಶಾಲೆಗಳಿಗೆ ಕಟ್ಟಡ ನಿರ್ಮಾಣ ಹಾಗೂ ನೂತನ ತಾಲೂಕು ಪಂಚಾಯತ್ ಕಟ್ಟಡ ಮತ್ತು ಹೆಬ್ರಿಗೆ ನೂತನ ತಾಲೂಕು ಕಛೇರಿ ಕಟ್ಟಡ ಮತ್ತು ಪ್ರವಾಸಿ ಬಂಗಲೆ.**
- ಕಾರ್ಕಳ ಕ್ಷೇತ್ರದ ಎಲ್ಲಾ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಯವರಿಗೆ ಕಾರ್ಯ ಕ್ಷಮತೆ ಹೆಚ್ಚಿಸುವ ನಿಟ್ಟಿನಲ್ಲಿ ಜನಸ್ನೇಹಿ ಆಡಳಿತ ನೀಡುವ ಉದ್ದೇಶದೊಂದಿಗೆ ಸರಕಾರಿ ನೌಕರರ **"ಕಾರ್ಯ ಬದ್ಧತೆ"** ಎಂಬ ವಿನೂತನ ಕಾರ್ಯಾಗಾರ ಆಯೀಜನೆ.

- ತುಳು ನಾಡು ಪರಶುರಾಮನ ಸೃಷ್ಟಿ ಎನ್ನುವುದು ನಂಬಿಕೆ ಇದಕ್ಕಾಗಿ ತುಳು ನಾಡಿನ ಈ ಪುಣ್ಯ ಭೂಮಿಯಾದ ಕಾರ್ಕಳ ತಾಲೂಕಿ ಬೈಲೂರು ಉಮಿಕಲ್ ಬೆಟ್ಟದಲ್ಲಿ ಸುಮಾರು **05 ಕೋಟಿ ವೆಚ್ಚದಲ್ಲಿ ಪರಶುರಾಮ ಥೀಂ ಪಾರ್ಕ್ ನಿರ್ಮಾಣ.**
- ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿರವರ ಆತ್ಮ ನಿರ್ಭರ ಭಾರತ ಸ್ಥಳೀಯ ಉತ್ಪಾದನೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕಾರ್ಕಳದ ಸ್ಥಳೀಯ ಬೆಳೆಗಳಾದ **ಕಾರ್ಲ ಕಜೆ ಅಕ್ಕಿ ಮತ್ತು ಕಾರ್ಲ ಬಿಳಿ ಬೆಂಡೆ** ಬ್ರಾಂಡ್ ಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿ ಕಾರ್ಕಳ ಸ್ಥಳೀಯ ಬೆಳೆಗಳಿಗೆ ಮಾರುಕಟ್ಟೆ ಒದಗಿಸುವ ಕಾರ್ಯಕ್ರಮ.
- **"ಮನೆಯೇ ಮೊದಲ ಪಾಠಶಾಲೆ"** ಎಂಬ **ಮಗ್ಗಿ ಹಾಗೂ ಚಿತ್ರ ಪುಸ್ತಕ** ವಿಕಾಸ ಸೇವಾ ಸಂಸ್ಥೆಯ ಸಹಭಾಗಿತ್ವದಲ್ಲಿ ಬಿಡುಗಡೆ. ಹಿಂದಿನ ಕೆಲವು ವರುಷಗಳ ಹಿಂದೆ ಮನೆಯೇ ಮೊದಲ ಪಾಠಶಾಲೆ ಆಗಿತ್ತು. ಕೊರೊನಾ ಕಾರಣದಿಂದಾಗಿ ಶಾಲೆಗಳು ಪ್ರಾರಂಭವಾಗದ ಹಿನ್ನೆಲೆಯಲ್ಲಿ ಅಂಗನವಾಡಿ ಹಾಗೂ ಪ್ರಾಥಮಿಕ ಶಾಲೆಯ ಮಕ್ಕಳು ಹಾಗೂ ಪೋಷಕರ ನಡುವಿನ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಬಾಂಧವ್ಯ ಬೆಸೆಯುವ ಕಾರ್ಯಕ್ರಮ.

- **ವಿಶ್ವದಾದ್ಯಂತ, ಇಡೀ ದೇಶದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗವು ವ್ಯಾಪಿಸಿದ ಸಂದರ್ಭ ಒಬ್ಬ ಜವಾಬ್ದಾರಿಯುತ ಶಾಸಕನಾಗಿ ಕೈಗೊಂಡ ದಿಟ್ಟ ಕ್ರಮಗಳು**

  - ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಕೋವಿಡ್–19 ಮುಂಜಾಗ್ರತಾ ಕ್ರಮವಾಗಿ ಕಾರ್ಕಳದ ವಿವಿಧ ಕಡೆಗಳಲ್ಲಿ **33 ಕ್ವಾರಂಟೈನ್ ಕೇಂದ್ರ**ಗಳನ್ನು ಆರಂಭಿಸಿರುವುದು ಹಾಗೂ ಅತ್ಯುತ್ತಮವಾಗಿ ನಿರ್ವಹಿಸಿರುವುದು ಇಡೀ ದೇಶಕ್ಕೆ ಮಾದರಿ.
  - ತಕ್ಷಣವೇ ಕಾರ್ಕಳ ಸಾರ್ವಜನಿಕ ಆಸ್ಪತ್ರೆಯಲ್ಲಿ **ಐಸಿಯು ಘಟಕ** ಸ್ಥಾಪನೆ. ಹೆಬ್ರಿ ಹಾಗೂ ನಿಟ್ಟೆ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ **ಆಮ್ಲಜನಕ ಸಹಿತ ಬೆಡ್‌ಗಳ ಕೋವಿಡ್ ಹಾರೈಕೆ ಕೇಂದ್ರಗಳ ಸ್ಥಾಪನೆ**. ಮಿಯಾರು ಮೊರರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕೋವಿಡ್ ಹಾರೈಕೆ ಕೇಂದ್ರ ಆರಂಭ.
  - ಇಡೀ ರಾಜ್ಯದಲ್ಲಿಯೇ ಪ್ರಪ್ರಥಮವಾಗಿ ಕಾರ್ಕಳ ಸಾರ್ವಜನಿಕ ಆಸ್ಪತ್ರೆಯಲ್ಲಿ ಮತ್ತು ಹೆಬ್ರಿ ಆಸ್ಪತ್ರೆಗಳಲ್ಲಿ ಆಕ್ಸಿಜನ್ ಕೊರತೆ ನೀಗಿಸುವ ನಿಟ್ಟಿನಲ್ಲಿ ಖಾಸಗಿ ಸಂಸ್ಥೆಗಳ ಸಹಕಾರದೊಂದಿಗೆ **ಆಮ್ಲಜನಕ ಉತ್ಪಾದನಾ ಘಟಕಗಳ ಸ್ಥಾಪನೆ.**
  - ಆಸ್ಪತ್ರೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳೊಂದಿಗೆ ನಿರಂತರ ಸಭೆ ಹಾಗೂ ಕೋವಿಡ್ ನಿಯಂತ್ರಣಕ್ಕೆ ಪೂರಕ ಕಾರ್ಯಕ್ರಮಗಳು.
  - ಕೊರೊನಾ 3ನೆ ಅಲೆಯನ್ನು ಅಂದಾಜಿನಲ್ಲಿಟ್ಟುಕೊಂಡು ವಿಕಾಸ ಸೇವಾ ಸಂಸ್ಥೆಯ ಸಹಯೋಗದೊಂದಿಗೆ **"ವಾತ್ಸಲ್ಯ"** ಎಂಬ ಹೆಸರಿನ ಉಚಿತ ಮಕ್ಕಳ ಆರೋಗ್ಯ ತಪಾಸಣಾ ಕಾರ್ಯಕ್ರಮ. ಕಾರ್ಕಳ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ **15 ವರ್ಷದ ಒಳಗಿನ ಸುಮಾರು 40,000 ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಕಾರ್ಯಕ್ರಮ** ಹಾಗೂ ಪೌಷ್ಠಿಕಾಂಶಯುಕ್ತ ಕಿಟ್‌ಗಳ ವಿತರಣೆ. ಇಡೀ ರಾಜ್ಯಕ್ಕೆ ಮಾದರಿಯಾದ ಕಾರ್ಯಕ್ರಮ.
  - ಕೊರೊನಾ ಮುಂಜಾಗ್ರತಾ ಕ್ರಮವಾಗಿ ಕಾರ್ಕಳ ಸಾರ್ವಜನಿಕ ಆಸ್ಪತ್ರೆಯಲ್ಲಿ **ಮಕ್ಕಳ ಐಸಿಯು ಘಟಕ** ಸ್ಥಾಪನೆಗೆ ಚಾಲನೆ.